# ಸಿವಿಲ್ ಜಡ್ಜ್ ಮತ್ತು ನ್ಯಾಯಿಕ ದಂಡಾಧಿಕಾರಿಗಳರವರ ನ್ಯಾಯಾಲಯ, ಹೆಗ್ಗಡದೇವನಕೋಟೆ

## ಸಿ.ಸಿ.ನಂ. 77/2015

| | | | |
|---|---|---|---|
| ಸಾಕ್ಷಿದಾರರ ಹೆಸರು | : | ಎಂ ಚಂದ್ರಶೇಖರ್ | ಪಿ.ಡಬ್ಲ್ಯೂ-05 |
| ತಂದೆಯ ಹೆಸರು | : | ಲೇಟ್ ಮಂಚಯ್ಯ | ಸಿ.ಡಬ್ಲ್ಯೂ-05 |
| ವಯಸ್ಸು | : | 57 ವರ್ಷ | |
| ಉದ್ಯೋಗ | : | ಅಬಕಾರಿ ರಕ್ಷಕ, ಮೈಸೂರು | ಸಾಕ್ಷಿಗೆ ಪ್ರಮಾಣ ವಚನ ಭೋದಿಸಿದ ದಿನಾಂಕಃ 23.12.2020 |
| ವಾಸಸ್ಥಳ | : | ಮೈಸೂರು ಟೌನ್ | ಕಲಂ 299 ಸಿ ಆರ್ ಪಿ ಸಿ ರೀತ್ಯಾ |

ಮುಖ್ಯ ವಿಚಾರಣೆಃ ಎಪಿಪಿ ರವರಿಂದಃ

ನಾನು 2005 ರಿಂದ 2010 ರವರೆಗೆ ಹೆಗ್ಗಡದೇವನಕೋಟೆ ಅಬಕಾರಿ ಕಛೇರಿಯಲ್ಲಿ ಅಬಕಾರಿ ರಕ್ಷಕನಾಗಿ ಕೆಲಸ ಮಾಡಿರುತ್ತೇನೆ. ಈ ಪ್ರಕರಣಕ್ಕೆ ಸಂಬಂಧಪಟ್ಟಂತೆ ದಿಃ 15.01.2009 ರಂದು ಅಬಕಾರಿ ಉಪ ಅಧೀಕ್ಷಕರ ಮಾರ್ಗದರ್ಶನದಲ್ಲಿ ನಾನು, ಚಾಸಾ.1, 2, ವಾಹನ ಚಾಲಕ ಪುಟ್ಟರಾಜು ಹಾಗೂ ಚಾಸಾ.3, 4, 8 ರವರು ಕ್ಯಾತನಹಳ್ಳಿ ಗೇಟ್ ಹತ್ತಿರ ರಸ್ತೆ ಕಾವಲು ಮಾಡುತ್ತಿದ್ದಾಗ, ಚಾಸಾ.8 ರವರಿಗೆ ಬಂದಂತಹ ಮಾಹಿತಿ ಮೇರೆಗೆ ನಾವುಗಳು ಗಂಗಂಡಹೊಸಹಳ್ಳಿ ಗ್ರಾಮಕ್ಕೆ ಹೋಗಿ ರಾಜು ಎಂಬುವರನ್ನು ವಿಚಾರಣೆ ಮಾಡಿ ಅವರು ಆರೋಪಿಯ ಮನೆಯನ್ನು ತೋರಿಸಿರುತ್ತಾರೆ. ಮನೆಯ ಹತ್ತಿರ ಹೋಗಿ ಕೂಗಿದಾಗ 1 ನೇ ಆರೋಪಿ ಮನೆಯ ಹೊರಗೆ ಬಂದಿರುತ್ತಾರೆ. ನಂತರ ಆತನನ್ನು ವಿಚಾರಣೆ ಮಾಡಿದಾಗ ಯಾವುದೇ ತರಹದ ಅಪರಾಧ ಮಾಡಿರುವುದಿಲ್ಲ ಎಂದು ತಿಳಿಸಿರುತ್ತಾರೆ. ನಂತರ ನಾವು ಮನೆ ಶೋಧನೆ ಮಾಡಬೇಕೆಂದು ಅವರಿಗೆ ತಿಳಿಸಿ, ಮನೆ ಒಳಗಡೆ ಹೋಗಿ ನೋಡಲಾಗಿ ಎಡಭಾಗದ ರೂಮಿನಲ್ಲಿ ಮಂಚದ ಕೆಳಗಡೆ ಒಂದು ಪ್ಲಾಸ್ಟಿಕ್ ಚೀಲ ತುಂಬಿರುವುದು ಕಂಡುಬಂದಿರುತ್ತದೆ. ಅದನ್ನು ಪರಿಶೀಲಿಸಿದಾಗ 180 ಎಂ ಎಲ್ ನ 30 ಒರಿಜಿನಲ್ ಚಾಯ್ಸ್ ವಿಸ್ಕಿ ಬಾಟಲ್‌ಗಳು ಹಾಗೂ 20 ನಂಬರ್ ಒನ್ ಹೈವೆ ವಿಸ್ಕಿ ಬಾಟಲ್‌ಗಳು ಇರುವುದು ಕಂಡುಬಂದಿರುತ್ತದೆ. ಅದನ್ನು ಆಲ್ಟ್ರಾವೈಲೆಟ್ ಲ್ಯಾಂಪ್ ಮತ್ತು ಬೂತ್ ಗಾಜನಲ್ಲಿ ಪರಿಶೀಲಿಸಿದಾಗ ಅದು ಕಲಬೆರಕೆ ಹಾಕಿರುವುದು ಕಂಡುಬಂದಿರುತ್ತದೆ. ನಂತರ ಅವುಗಳನ್ನು ಮಹಜರ್ ಕ್ರಮ ಜರುಗಿಸಿ ವಶಕ್ಕೆ ಪಡೆದುಕೊಂಡು, 18 ಬಾಟಲ್ ಒರಿಜಿನಲ್ ಚಾಯ್ಸ್ ವಿಸ್ಕಿ ಮತ್ತು 10 ಬಾಟಲ್ ಹೈವೆ ನಂಬರ್ ಒನ್ ವಿಸ್ಕಿ ಬಾಟಲ್‌ಗಳನ್ನು ಮಾದರಿಗಾಗಿ ತೆಗೆದುಕೊಳ್ಳಲಾಯಿತು.

1 ನೇ ಆರೋಪಿಯನ್ನು ವಿಚಾರಿಸಿದಾಗ, 2 ನೇ ಆರೋಪಿಯು ತಂದು ಕೊಟ್ಟಿರುವ ಬಗ್ಗೆ ತಿಳಿಸಿರುತ್ತಾರೆ. ಆತನನ್ನು ವಿಚಾರ ಮಾಡಲಾಗಿ ಆತನ ಹತ್ತಿರ ಯಾವುದೇ ರಹದಾರಿ ಇರುವುದಿಲ್ಲ ಎಂದು ತಿಳಿಸಿರುತ್ತಾರೆ. ಸಾಕ್ಷಿಯು ಸದರಿ ಮಹಜರ್ ನ್ನು ನೋಡಿ ಅದರಲ್ಲಿ ತನ್ನ ಸಹಿಯನ್ನು ಗುರುತಿಸಿದ್ದು, ಮಹಜರ್ ನ ಧೃಡೀಕೃತ ನಕಲನ್ನು ಈಗಾಗಲೇ ನಿಪಿ.1 ಎಂದು ಗುರುತಿಸಲಾಗಿದ್ದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-1(ಡಿ) ಎಂದು ಗುರುತಿಸಲಾಯಿತು. ಆ ದಿನ ಮಾದರಿಗಾಗಿ ತೆಗೆದುಕೊಂಡ ಬಾಟಲ್‌ಗಳನ್ನು ನೋಡಿದರೆ ಗುರುತಿಸುತ್ತೇನೆ. ಅವುಗಳನ್ನು ಈಗಾಗಲೇ ಸಿ.ಸಿ. 449/2009 ರಲ್ಲಿ ಮುದ್ದೆ ಮಾಲು 1 ರಿಂದ 28 ಎಂದು ಗುರುತಿಸಲಾಗಿರುತ್ತದೆ. ಅದೇ ರೀತಿಯಾಗಿ 1 ನೇ ಆರೋಪಿಯನ್ನು ನೋಡಿದರೆ ಗುರುತಿಸುತ್ತೇನೆ. 1 ನೇ ಆರೋಪಿಯು ತಲೆ ಮರೆಸಿಕೊಂಡಿರುತ್ತಾರೆ.

(ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸಾ ಸ ಇ ಒ.,

ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,
ಹೆಗ್ಗಡದೇವನಕೋಟೆ